# ನಗರಸಭಾ ಕಾರ್ಯಾಲಯ, ತುಮಕೂರು.

ನಂ.ನಸತು/ತಾಂಶಾ/ಟೆಂಡರ್/ಸಿಆರ್/402/2009–10 ದಿನಾಂಕ: 18–07–2009.

## ಅಲ್ಪಾವಧಿ ಟೆಂಡರ್ ಪ್ರಕಟಣೆ

ತುಮಕೂರು ನಗರಸಭಾ ವ್ಯಾಪ್ತಿಯ ದಿನನಿತ್ಯದ ಸ್ವಚ್ಚತಾ ಕಾರ್ಯಕ್ಕೆ ಪೌರಕಾರ್ಮಿಕರು ಅವಶ್ಯಕತೆ ಇದ್ದು, ಹೊರಮೂಲದಿಂದ ಸಿಬ್ಬಂದಿಗಳನ್ನು ಪೂರೈಸಲು ಆಸಕ್ತಿಯುಳ್ಳ ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿತ ಹಾಗೂ ವಾಹನ ಮಾಲೀಕರು ಅಥವಾ ಬಾಡಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದು, ಟೆಂಡರ್‌ನಲ್ಲಿ ಭಾಗವಹಿಸಬಹುದು.

1. ಟೆಂಡರ್ ಫಾರಂಗಳನ್ನು ನೀಡುವ **ದಿನಾಂಕ 29–08–2009 ರಿಂದ 14–09–2009** ರವರಗೆಗೆ ಕಛೇರಿಯ ವೇಳೆಯಲ್ಲಿ ಟೆಂಡರ್ ಶುಲ್ಕ ಪಾವತಿಸಿದ ಅರ್ಹ ಗುತ್ತಿಗೆದಾರರಿಗೆ ನೀಡಲಾಗುವುದು.
2. ಭರ್ತಿ ಮಾಡಿದ ಫಾರಂಗಳನ್ನು **ದಿನಾಂಕ 16–09–2009 ರಂದು 4.30 ಗಂಟೆಯೊಳಗಾಗಿ** ಪೌರಾಯುಕ್ತರು, ನಗರಸಭೆ, ತುಮಕೂರು ರವರ ಕೊಠಡಿಯಲ್ಲಿ ಇಟ್ಟಿರುವ ಟೆಂಡರ್ ಬಾಕ್ಸ್‌ನಲ್ಲಿ ಅಥವಾ ಮಾನ್ಯ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ತುಮಕೂರು ರವರ ಕಛೇರಿಯ ಟೆಂಡರ್ ಬಾಕ್ಸ್‌ನಲ್ಲಿ ಹಾಕಬಹುದಾಗಿದೆ.
3. **ಸಲ್ಲಿಸಲಾಗಿರುವ ಟೆಂಡರ್‌ಗಳನ್ನು ಸಾಧ್ಯವಾದರೆ ದಿನಾಂಕ 16–09–2009 ರಂದು 4.45** ಗಂಟೆಗೆ ಹಾಜರಿರುವ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವುದು. ಅಥವಾ ಮರುದಿನ ಕಛೇರಿ ವೇಳೆಯಲ್ಲಿ ಹಾಜರಿರುವ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವುದು.

| ಕ್ರ.ಸಂ. | ಕಾಮಗಾರಿ ಹೆಸರು | ಅಂದಾಜು ಮೊತ್ತ (ಲಕ್ಷಗಳಲ್ಲಿ) | ಇಎಂಡಿ ಮೊತ್ತ ರೂಗಳಲ್ಲಿ | ಟೆಂಡರ್ ಫಾರಂ ಬೆಲೆ | ಗುತ್ತಿಗೆದಾರರು |
|---|---|---|---|---|---|
| 1 | ನಗರದ ಹೊರವಲಯ ಪ್ರದೇಶವನ್ನು 300 ಪೌರಕಾರ್ಮಿಕರನ್ನು ಹೊರಮೂಲದಿಂದ 6 ದಿನದ ಮಟ್ಟಿಗೆ ಸರಬರಾಜು ಮಾಡುವುದು. | – | 20000.00 | 1000+ ತೆರಿಗೆ | ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಿದ ಗುತ್ತಿಗೆದಾರರು |
| 2 | ನಗರಸಭಾ ವ್ಯಾಪ್ತಿಯಲ್ಲಿ ಸ್ವಚ್ಚಗೊಳಿಸಲು ಎರಡು ಜೆಸಿಬಿಯನ್ನು ವಾಹನದ ಮೀಟರ್ ಗಂಟೆ ಆಧಾರದ ಮೇಲೆ ಹಾಗೂ 6 ಟ್ರಾಕ್ಟರ್‌ಗಳನ್ನು ದಿನದ ಬಾಡಿಗೆ ಆಧಾರದ ಮೇಲೆ ನೀಡುವುದು | – | 7500.00 | 1000+ ತೆರಿಗೆ | ವಾಹನ ಮಾಲೀಕರು ಅಥವಾ ಬಾಡಿಗೆದಾರರು |
| 3 | ತುಮಕೂರು ನಗರಸಭಾ ಕಛೇರಿಯ ಸರ್ಕಾರಿ ವಾಹನಗಳಿಗೆ ಚಾಲಕರು ಬೇಕಾಗಿದ್ದು ಹೊರ ಮೂಲದಿಂದ ಸರಬರಾಜು ಮಾಡಿಕೊಳ್ಳುವುದು. | 9.00 | 22500.00 | 1000+ ತೆರಿಗೆ | ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಿದ ಗುತ್ತಿಗೆದಾರರು |
| 4 | ತುಮಕೂರು ನಗರಸಭೆ ವ್ಯಾಪ್ತಿಯಲ್ಲಿ ಬರುವ ಒಳಚರಂಡಿ ಹಾಗೂ ಎಲ್ಲಾ ಮ್ಯಾನ್‌ಹೋಗಳನ್ನು ನಿರ್ವಹಣೆ ಮಾಡುವುದು. | 8.00 | 20000.00 | 1000+ ತೆರಿಗೆ | ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಿದ ಗುತ್ತಿಗೆದಾರರು |

### ಷರತ್ತುಗಳು

1. ಗುತ್ತಿಗೆದಾರರು ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿತರಾಗಿರುವ ಬಗ್ಗೆ ವಿವರಣೆಯನ್ನು ಹಾಗೂ ದಾಖಲಾತಿಯನ್ನು ಟೆಂಡರ್ ದರಪಟ್ಟಿಯೊಂದಿಗೆ ಲಗತ್ತಿಸಿ ಸಲ್ಲಿಸಬೇಕಾಗಿರುತ್ತದೆ. ಮತ್ತು ಟೆಂಡರ್ ಅನುಮೋದನೆ ಆದ ಗುತ್ತಿಗೆದಾರರು ನಗರಸಭೆಯಲ್ಲಿ ಈ ಹಿಂದೆ ಸ್ವಚ್ಚತಾ ವಿಭಾಗದಲ್ಲಿ ಹೊರ ಮೂಲದಿಂದ ಹಾಗೂ ತಾತ್ಕಾಲಿಕವಾಗಿ ಸೇವೆ ಸಲ್ಲಿಸಿದ ಕೆಲಸಗಾರರಿಗೆ ಆದ್ಯತೆ ನೀಡಿ ಅವರ ಸೇವೆಯನ್ನು ನಗರಸಭೆಗೆ ಒದಗಿಸತಕ್ಕದ್ದು.
2. 300 ಕೆಲಸಗಾರರ ಪೈಕಿ ಯಾರಾದರು ಗೈರು ಹಾಜರಾಗಿದ್ದಲ್ಲಿ ಬದಲಿ ವ್ಯವಸ್ಥೆಯನ್ನು ಮಾಡತಕ್ಕದ್ದು.
3. ಟೆಂಡರ್ ಅನುಮೋದನೆ ಆದ ಗುತ್ತಿಗೆದಾರರು ಭದ್ರತಾ ಠೇವಣಿ ಆಗಿ 10,000/– ರೂ.ಗಳನ್ನು ಪೌರಾಯುಕ್ತರು, ನಗರಸಭೆ, ತುಮಕೂರು ರವರ ಹೆಸರಿನಲ್ಲಿ ಡಿ.ಡಿ.ಯನ್ನು ಟೆಂಡರ್ ಕರಾರು ಮಾಡಿಕೊಳ್ಳುವ ಸಮಯದಲ್ಲಿ ಸಲ್ಲಿಸತಕ್ಕದ್ದು.

4. ಟೆಂಡರ್ ಅರ್ಜಿಯನ್ನು ಸಲ್ಲಿಸುವಾಗ ಕಾರ್ಮಿಕ ಇಲಾಖೆಯಲ್ಲಿ ಅರ್ಹ ದರ್ಜೆ ನೊಂದಾಯಿತರಾಗಿರುವ ಬಗ್ಗೆ ಪ್ರಮಾಣ ಪತ್ರವನ್ನು ಹಾಜರುಪಡಿಸುವುದು.
5. ನಿಬಂಧನೆಗಳನ್ನು ನಮೂದಿಸಿ ಸಲ್ಲಿಸುವ ಟೆಂಡರುಗಳನ್ನು ತಿರಸ್ಕರಿಸಲಾಗುವುದು.
6. ಗುತ್ತಿಗೆದಾರರು ಸರಬರಾಜು ಮಾಡುವ ಕೆಲಸಗಾರರಿಗೆ ಗುರುತಿನ ಚೀಟಿ ಮತ್ತು ಸಮವಸ್ತ್ರಗಳನ್ನು ಧರಿಸಲು ನೀಡಬೇಕು.
7. ಯಾವ ಕಾರಣವನ್ನು ಸಹ ನೀಡದೆ ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ.
8. ಮೇಲ್ಕಂಡ ವಿಷಯದಲ್ಲಿ ಏನಾದರು ಸೇರ್ಪಡೆ ಅಥವಾ ಮಾರ್ಪಡಿಸುವ ಹಕ್ಕನ್ನು ನಗರಸಭೆ ಕಾಯ್ದಿರಿಕೊಂಡಿದೆ.
9. ಗುತ್ತಿಗೆಯ ಕಾರ್ಯಾದೇಶ ಪಡೆದ ದಿನಾಂಕದಿಂದ 30 ದಿನಗಳ ಅವಧಿಗೆ ಚಾಲ್ತಿಯಲ್ಲಿರುತ್ತೆ.
10. ಹೆಚ್ಚಿನ ವಿಷಯಗಳಿಗೆ ನಗರಸಭೆಯ ಕಛೇರಿಯ ಅಭಿಯಂತರರ ಶಾಖೆಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
11. ಕಾಲಕಾಲಕ್ಕೆ ಕಾರ್ಮಿಕ ಇಲಾಖೆಯಿಂದ ನೀಡುವ ಸೂಚನೆಗಳಿಗೆ ನೀವು ಬದ್ದರಾಗಿರಬೇಕು.

| ಸಹಿ/– | ಸಹಿ/– | ಸಹಿ/– |
|---|---|---|
| **ಅಧ್ಯಕ್ಷರು** | **ಉಪಾಧ್ಯಕ್ಷರು** | **ಪೌರಾಯುಕ್ತರು** |
| **ನಗರಸಭೆ, ತುಮಕೂರು.** | **ನಗರಸಭೆ, ತುಮಕೂರು.** | **ನಗರಸಭೆ, ತುಮಕೂರು.** |